## <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.</u>

### ಓ.ಎಸ್.212/2022

ಸಾಕ್ಷಿಯನ್ನು ದಿಃ **25.06.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

<u>ಮುಂದುವರಿದ ಪಾಟೀ ಸವಾಲು ಃ ಪ್ರತಿವಾದಿಯರ ಪರ ಶ್ರೀ **ASY** ವಕೀಲರಿಂದಃ-</u>

ನಮ್ಮ ತಂದೆ ಮೂಲತಃ ವಡೇಯರ ಹೊಸಹಳ್ಳಿ ಗ್ರಾಮದವರು. ನನ್ನ ತಾತ ಈರಾಚಾರಿ ನಾಡಪ್ಪನಹಳ್ಳಿ ಗ್ರಾಮದವರು. ನನ್ನ ತಾತ ನಾಡಪ್ಪನಹಳ್ಳಿಯಲ್ಲಿ ಇರುವಾಗಲೇ ನನ್ನ ತಂದೆ ನನ್ನ ದೊಡ್ಡಪ್ಪ ಮತ್ತು ಅವರ ಸಹೋದರರು ನಾಡಪ್ಪನಹಳ್ಳಿಯಲ್ಲಿಯೇ ಇದ್ದರು ಎಂದರೆ ಸರಿ. ನನ್ನ ತಾತ ನಾಡಪ್ಪನಹಳ್ಳಿಯಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ವಡೇಯರಹೋಸಹಳ್ಳಿಯಲ್ಲಿ ಮೃತಪಟ್ಟಿದ್ದಾರೆ. ನನ್ನ ತಾತ ಯಾವಾಗ ಮೃತ ಪಟ್ಟರು ಎಂದು ಹೇಳಲು ಆಗುವುದಿಲ್ಲ. ನನ್ನ ತಾತ ನಾಡಪ್ಪನಹಳ್ಳಿಯಲ್ಲಿಯೇ ತೀರಿಕೊಂಡರು ಎಂದರೆ ಸರಿಯಲ್ಲ. ನನ್ನ ತಾತ ತೀರಿಕೊಂಡಾಗ ನಾನು ಹುಟ್ಟಿರಲಿಲ್ಲ. ನನ್ನ ತಾತ ವಡೇಯರ ಹೊಸಳ್ಳಿಯಲ್ಲಿ ಮೃತಪಟ್ಟರು ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ನಾನು ಊಹೆಯ ಮೇರೆಗೆ ನನ್ನ ತಾತ ವಡೇಯರಹೊಸಳ್ಳಿಯಲ್ಲಿ ತೀರಿಕೊಂಡಿದ್ದಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತ ತೀರಿಕೊಂಡ ನಂತರ ನನ್ನ ಅಜ್ಜಿ ಪುಟ್ಟಮ್ಮ ಮತ್ತು ಬೆಟ್ಟಾಚಾರಿ ವಡೇಯರ ಹೊಸಹಳ್ಳಿಗೆ ಬಂದು ಸೇರಿಕೊಂಡರು ಎಂದರೆ ಸರಿ. ವಡೇಯರ ಹೊಸಳ್ಳಿ ಪುಟ್ಟಮ್ಮರವರ ತಂದೆಯ ಮನೆ ಆಗಿದ್ದರಿಂದ, ಅಲ್ಲಿಗೆ ಬಂದು ಸೇರಿದರು ಎಂದರೆ ಸರಿ. ನನ್ನ ತಾತ ವಡೇಯರ ಹೊಸಳ್ಳಿಯಲ್ಲಿ ಯಾವುದೇ ಭೂಮಿ ಉಳುಮೆ ಮಾಡದೇ ನಾಡಪ್ಪನಹಳ್ಳಿಯಲ್ಲಿಯೇ ತೀರಿಕೊಂಡರು ಎಂದರೆ ಸರಿಯಲ್ಲ. ನನ್ನ ತಾತ ತೀರಿಕೊಂಡ ನಂತರವೇ ನನ್ನ ಅಜ್ಜಿ ಮತ್ತು ಬೆಟ್ಟಾಚಾರಿ ಪುಟ್ಟಮ್ಮರವರ ತವರು ಮನೆಯಾದ ವಡೇಯರಹೊಸಳ್ಳಿಗೆ ಬಂದು ಸೇರಿದರು ಎಂದರೆ ಸರಿ. ಈ ದಾವೆಯ ದಾವಾ ಸ್ವತ್ತಿನ ಸರ್ವೆ ನಂಬರ್ ಗೊತ್ತಿಲ್ಲ. ಈ ದಾವೆಯನ್ನು ಒಟ್ಟು 5 ಎಕರೆಗೆ ಸಲ್ಲಿಸಿದ್ದೇನೆ. ನಾನು ದಾವೆಯನ್ನು 3ವರೆ ಎಕರೆಗೆ ಸಲ್ಲಿಸಿಲ್ಲ. ದಾವಾ ಐಟಂ ನಂ. 1 ಮೂಲತಃ ಯಾರಿಗೆ

ಸೇರಿದ್ದು ಎಂದು ಗೊತ್ತಿಲ್ಲ. ದಾವಾ ಐಟಂ ನಂ. 1 ಮೂಲತಃ ಸರ್ಕಾರಿ ಗೋಮಾಳ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ಮೂಲತಃ ಸರ್ವೆ ನಂ. 24 ಆಗಿದ್ದು, ಅದರ ಒಟ್ಟು ವಿಸ್ತೀರ್ಣ 305.13 ಎಕರೆ ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ಪಹಣಿಯನ್ನು ನೋಡಿ ನನಗೆ ಹೇಳಲು ಆಗುವುದಿಲ್ಲ. ಬೆಟ್ಟಾಚಾರಿ ವಡೆಯರ ಹೊಸಹಳ್ಳಿಗೆ ಬಂದು ಸೇರಿಕೊಂಡ ನಂತರ ಸರ್ವೆ ನಂ. 24 ರಲ್ಲಿ 305.13 ಎಕರೆಯ ಪೈಕಿ 3 ಎಕರೆ 20 ಗುಂಟೆಯನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಈಗ ತೋರಿಸುತ್ತಿರುವ ಅರ್ಜಿ ಬೆಟ್ಟಾಚಾರಿ ಅಕ್ರಮ ಸಕ್ರಮದಡಿಯಲ್ಲಿ ಮೇಲೆ ಹೇಳಿದ 3 ಎಕರೆ 20 ಗುಂಟೆಯನ್ನು ತನ್ನ ಸಾಗುವಳಿಯಾಧಾರದ ಮೇಲೆ ಮಂಜೂರು ಮಾಡಿಕೊಡುವಂತೆ ಸಲ್ಲಿಸಿದ ಅರ್ಜಿ ಎಂದರೆ ಗೊತ್ತಿಲ್ಲ. ದಿಃ 04.11.1996 ರಂದು ಆದೇಶ ಮಾಡಿ 3 ಎಕರೆ 20 ಗುಂಟೆಯನ್ನು ನನ್ನ ದೊಡ್ಡಪ್ಪ ಬೆಟ್ಟಾಚಾರಿ ರವರಿಗೆ ಮಂಜೂರು ಮಾಡಲಾಗಿದೆ ಎಂದರೆ ಸರಿಯಲ್ಲ. 1994 ರಿಂದ 1996ನೇ ಸಾಲಿನಲ್ಲಿ ಸರ್ವೆ ನಂ. 24 ರಲ್ಲಿ 3 ಎಕರೆ 20 ಗುಂಟೆಯ ಬಗ್ಗೆ ಸಾಗುವಳಿ ಚೀಟಿಯನ್ನು ಬೆಟ್ಟಾಚಾರಿ ರವರಿಗೆ ನೀಡಲಾಯಿತು ಎಂದರೆ ಹಿರಿಯ ಮಗನಾದ ಕಾರಣ ನೀಡಿದ್ದಾರೆ. ಸಾಗುವಳಿ ಚೀಟಿ ನೀಡಿದ ನಂತರ ಕೇವಲ ಬೆಟ್ಟಾಚಾರಿ ಮಾತ್ರ ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂದರೆ ನನ್ನ ತಂದೆ ಮತ್ತು ನಾವು ಕೂಡ ಸಾಗುವಳಿ ಮಾಡುತ್ತಿದ್ದೆವು. ನನ್ನ ತಂದೆಯಾಗಲೀ ನಾವಾಗಲೀ ಯಾವತ್ತು ದಾವಾ ಐಟಂ ನಂ.1 ಕ್ಕೆ ಹೋಗಿಲ್ಲ ಮತ್ತು ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ.

ಈಗ ತೋರಿಸುತ್ತಿರುವ ದಾಖಲೆಯ ಪ್ರಕಾರ ಬೆಟ್ಟಾಚಾರಿ ರವರಿಗೆ ಸರ್ವೆ ನಂ. 24 ರಲ್ಲಿ ಮಂಜೂರಾದ 3 ಎಕರೆ 20 ಗುಂಟೆ ದುರಸ್ತು ಆಗಿ ಸರ್ವೆ ನಂ. 54 ಆಗಿದೆ ಎಂದರೆ ಗೊತ್ತಿಲ್ಲ. ಈಗ ತೋರಿಸುತ್ತಿರುವ ದಾಖಲೆಯನ್ನು ನನಗೆ ಓದಲು ಬರುವುದಿಲ್ಲ. ನನ್ನ ತಾಯಿಯ ತವರು ಮನೆ ವಡೆಯರ ಹೊಸಹಳ್ಳಿ ಎಂದರೆ ಸರಿ. ನನ್ನ ಅಜ್ಜಿ ಪುಟ್ಟಮ್ಮ ಮತ್ತು ದೊಡ್ಡಪ್ಪ ಬೆಟ್ಟಾಚಾರಿ ವಡೆಯರ ಹೊಸಹಳ್ಳಿಗೆ ಬಂದ ನಂತರ ನನ್ನ ತಾಯಿಯೂ ಕೂಡ ವಡೆಯರ ಹೊಸಹಳ್ಳಿ ಗ್ರಾಮದವರೇ ಆದ ಕಾರಣ ನನ್ನ ತಂದೆ ವೀರಭದ್ರಚಾರಿ ಕೂಡ

ವಡೆಯರ ಹೊಸಹಳ್ಳಿಗೆ ಬಂದದು ಸೇರಿಕೊಂಡರು ಎಂದರೆ ಸರಿ. ನನ್ನ ತಂದೆ ನನ್ನ ತಾಯಿಯ ತವರು ಮನೆಗೆ ಸೇರಿಕೊಂಡರು ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಮತ್ತು ಅಜ್ಜಿಯ ಜೊತೆ ಸೇರಿಕೊಂಡರು. ನನ್ನ ತಂದೆ ಮದುವೆ ಮಾಡಿಕೊಂಡು ಹೆಂಡತಿ ಮನೆ ಸೇರಿಕೊಂಡರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.1ನ್ನು ನನ್ನ ತಂದೆಯಾಗಲೀ, ತಾತನಾಗಲೀ ಸಾಗುವಳಿ ಮಾಡಿದ ಬಗ್ಗೆ ದಾಖಲೆ ಇಲ್ಲ. ದಾವಾ ಐಟಂ ನಂ.1 ಸರ್ಕಾರದಿಂದ ಬೆಟ್ಟಾಚಾರಿಗೆ ಮಂಜೂರಾಗಿರುವ ಸ್ವತ್ತಾದ ಕಾರಣ ಅದರಲ್ಲಿ ನನ್ನ ತಂದೆಗಾಗಲೀ, ನಮಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 2 ರ ಸರ್ವೆ ನಂಬರ್ ಮತ್ತು ಎಷ್ಟು ವಿಸ್ತೀರ್ಣ ಎಂದದು ಗೊತ್ತಿಲ್ಲ. ದಾವಾ ಐಟಂ ನಂ.2 ನ್ನು ನೋಡಿದ್ದೇನೆ. ದಾವಾ ಐಟಂ ನಂ.2 ವಡೆಯರಹೊಸಹಳ್ಳಿ ಗ್ರಾಮಕ್ಕೆ ಸೇರಿದೆ. ನಿಪಿ-1 ರಿಂದ 3 ರ ಪಹಣಿಗಳಲ್ಲಿ ನನ್ನ ತಾತನ ಅಥವಾ ನನ್ನ ತಂದೆಯ ಹೆಸರು ಇಲ್ಲ. ದಾವಾ ಐಟಂ ನಂ.1 ಯಾವ ಊರಿಗೆ ಸೇರಿದೆ ಎಂದು ಹೇಳಲು ಆಗುವುದಿಲ್ಲ. ನಿಪಿ-1 ರಿಂದ 3 ರ ದಾಖಲೆಗಳು ದಾವಾ ಐಟಂ ನಂ.1 ಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.2 ಮೂಲತಃ ಪುಟ್ಟಮ್ಮರವರ ತಂದೆಯ ಆಸ್ತಿಯಾಗಿದೆ. ಆ ಬಗ್ಗೆ ದಾಖಲೆ ಇದೆಯೇ ಎಂದರೆ ಇಲ್ಲ. ದಾವಾ ಐಟಂ ನಂ.2 ಪುಟ್ಟಮ್ಮರವರ ತಂದೆಯ ಆಸ್ತಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-15 ಏನು ದಾಖಲೆ ಎಂದರೆ ಗೊತ್ತಿಲ್ಲ. ಅದರಲ್ಲಿ ಪುಟ್ಟಮ್ಮನ ಬೆಟ್ಟಾಚಾರಿ ಬಿನ್ ಈರಾಚಾರಿ ಎಂದು ನಮೂದಾಗಿದೆ ಎಂದರೆ ಸರಿ. ದಾವಾ ಐಟಂ ನಂ.2 ಇನಾಮು ಜಮೀನು ಎಂದರೆ ಗೊತ್ತಿಲ್ಲ. ವಡೇಯರ ಹೊಸಹಳ್ಳಿಯಲ್ಲಿ ಪಿ.ಎಸ್ ರಾಜಶೇಖರಪ್ಪ, ಪಿ.ಎಸ್ ವಿಶ್ವನಾಥಪ್ಪ ಮತ್ತು ಪಿ.ಎಸ್ ಶ್ರೀಕಂಠಪ್ಪ ಎಂಬ ಇನಾಮುದಾರರು ಇದ್ದರು ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ.2 ಮೂಲತಃ ಸದರಿ ಇನಾಮುದಾರರಿಗೆ ಸೇರಿದ್ದು ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ. 2ನ್ನು ಬೆಟ್ಟಾಚಾರಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಅಣ್ಣ ತಮ್ಮ ಇಬ್ಬರೂ

ಮಾಡುತ್ತಿದ್ದರು. ನನ್ನ ತಂದೆ ಯಾವತ್ತು ಅದನ್ನು ಸಾಗುವಳಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲವಾಗಲೀ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ದಾಖಲೆ ಇನಾಮುದಾರರ ಭೂಮಿಯನ್ನು ಸಾಗುವಳಿ ಮಾಡುತ್ತಿರುವವರೆ ಮಂಜೂರಿ ಮಾಡಿಕೊಡಬೇಕೆಂದು ಸಲ್ಲಿಸಿದ ಅರ್ಜಿಯ ಮೇರೆಗೆ ನೀಡಿದ ನೋಟಿಸು ಎಂದರೆ ಇರಬಹುದು. ಈಗ ತೋರಿಸುತ್ತಿರುವ ದಾಖಲೆ ಬೆಟ್ಟಾಚಾರಿ ರವರಿಗೆ ದಾವಾ ಐಟಂ ನಂ.2 ನ್ನು ಮಂಜೂರಿ ಮಾಡಿದ ಹಿಂಬರಹ ಎಂದರೆ ಸರಿಯಲ್ಲ. ಸದರಿ ದಾಖಲೆ ಏನೆಂದು ನನಗೆ ಓದಲು ಬರದೇ ಇರುವ ಕಾರಣ ಸರಿಯಲ್ಲ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿ. ದಾವಾ ಐಟಂ ನಂ.2 ನ್ನು ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಇಲ್ಲ. ನಾನು ಅದನ್ನು ವ್ಯವಸಾಯ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಇಲ್ಲ. ದಾವಾ ಐಟಂ ನಂ. 2 ಮಂಜೂರಾತಿ ಮೂಲಕ ಪ್ರತಿವಾದಿಗಳ ತಂದೆಗೆ ಬಂದಿರುವ ಕಾರಣ ಅದರಲ್ಲಿ ನನಗ ಹಕ್ಕಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.3 ಜಮೀನಾಗಿದೆ. ದಾವಾ ಐಟಂ ನಂ.3 ಮೂಲತಃ ಪುಟ್ಟಮ್ಮರವರರಿಗೆ ಅವರ ತಂದೆಯ ಮನೆಯಿಂದ ಕೊಟ್ಟಿದ್ದಾರೆ. ಆ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ದಾವಾ ಐಟಂ ನಂ.3 ಪುಟ್ಟಮ್ಮ ರವರಿಗೆ ಅವರ ತಂದೆಯ ಮನೆಯಿಂದ ಕೊಟ್ಟಿದ್ದಲ್ಲ ಎಂದರೆ ಸರಿಯಲ್ಲ. ಅದು ಮೂಲತಃ ಗ್ರಾಮಠಾಣಾ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ರ ಪಂಚಾಯಿತಿ ಖಾತೆ ಪ್ರತಿವಾದಿಯರ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ಪಂಚಾಯ್ತಿಯಿಂದ ನೇರವಾಗಿ ಪ್ರತಿವಾದಿಯರ ತಂದೆಗೆ ಬಂದ ಆಸ್ತಿ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪ್ರತಿವಾದಿಯರ ತಂದೆಗೆ ಸೇರಿದೆ ಎಂದು ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.3 ರಲ್ಲಿ ಈಗಲೂ ಪ್ರತಿವಾದಿಯರೇ ವಾಸ ಇದ್ದಾರೆ ಎಂದರೆ ಇಲ್ಲ. ನಾವು ಆ ಮನೆಯಲ್ಲಿ ವಾಸ ಇಲ್ಲ. ಸದರಿ ಮನೆಯಲ್ಲಿ ಜಾನುವಾರುಗಳನ್ನು ಕಟ್ಟಿ

ಹಾಕಿ ಪ್ರತಿವಾದಿಯರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ದಾವಾ ಐಟಂ ನಂ.1 ಮತ್ತು 2 ರಲ್ಲಿ ಈಗಲೂ ಕೂಡ ಪ್ರತಿವಾದಿಯರೇ ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ನಾವಾಗಲೀ ನನ್ನ ತಂದೆಯಾಗಲೀ ದಾವಾ ಸ್ವತ್ತುಗಳಿಗೆ ಕಂದಾಯ ಕಟ್ಟು ತ್ತಿರಲಿಲ್ಲ ಎಂದರೆ ನನ್ನ ತಂದೆ ಅಣ್ಣನಾದ ಬೆಟ್ಟಾಚಾರಿಯವರ ಬಳಿ ಕೊಟ್ಟ ಕಂದಾಯ ಕಟ್ಟುತ್ತಿದ್ದರು. ಆ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ಕೇಸಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಸ್ವತ್ತುಗಳನ್ನು 3ನೇ ವ್ಯಕ್ತಿಗೆ ಮಾರಾಟ ಮಾಡಲು ಪ್ರಯತ್ನಿಸಿಲ್ಲ. ಪ್ರತಿವಾದಿಯರು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ನಾನು ಹೇಳಿ ಬರೆಸಿಲ್ಲ. ದಾವಾ ಆಸ್ತಿಗಳಲ್ಲಿ ನಾವು ಜಂಟಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಜಂಟಿ ಸ್ವಾಧೀನ ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಜಂಟಿ ಸ್ವಾಧೀನದಲ್ಲಿ ಇದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯರ ಮಧ್ಯೆ ವಿಶ್ವಾಸ ಅಷ್ಟಕ್ಕೆ ಅಷ್ಟೆ ಎಂದರೆ ಚೆನ್ನಾಗಿದ್ದೇವೆ. ನಾನು ಪ್ರತಿವಾದಿಯರ ಬಳಿ ಭಾಗ ಕೊಡುವಂತೆ ಕೇಳಿಲ್ಲ ಎಂದರೆ ಕೇಳಿದ್ದೇನೆ. ಈ ಕೇಸಿಗೋಸ್ಕರ ಸೃಷ್ಟಿಮಾಡಿಕೊಂಡ ವಿಚಾರ ಎಂದರೆ ಸರಿಯಲ್ಲ.

ನಿಪಿ-4 ರಿಂದ 12 ರ ದಾಖಲೆಗಳು ಪ್ರತಿವಾದಿಯರ ಹೆಸರಿನಲ್ಲಿಯೇ ಇದೆ ಎಂದರೆ ಸರಿ. ನಿಪಿ-14 ದಾವಾ ಸ್ವತ್ತಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಬೆಟ್ಟಾಚಾರಿ ರವರಿಗೆ ಸ್ವಯಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರಿದು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಭೂಮಿಯ ಬೆಲೆ ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಪ್ರತಿವಾದಿಯರಿಗೆ ತೊಂದರೆ ಕೊಟ್ಟು ಅವರನ್ನು ಒತ್ತಡದಲ್ಲಿ ಸಿಲುಕಿಸಿ ಲಾಭ ಮಾಡಿಕೊಳ್ಳಬೇಕೆಂದು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಅದನ್ನು ಬರೆಯಲು ನನ್ನ ಮಗ ಮಾಹಿತಿ ಕೊಟ್ಟಿದ್ದಾನೆ. ದಾವೆ ಸಲ್ಲಿಸಲು

ನನ್ನ ಮಗ ಮಾಹಿತಿ ಕೊಟ್ಟಿದ್ದಾನೆ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಭಾಗಾಂಶ ಇಲ್ಲವೆಂದು ಗೊತ್ತಿದ್ದರೂ ಕೂಡ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.